# ನೀ ಪರಿಚಾಯ Lyrics In Kannada

ನೀ ಪರಿಚಯ ಹೇಳದೆ
ಸೆಳೆದೆ ಉಸಿರನು ಮೆಲ್ಲಗೆ
ನಾ ಹೊರಟರೂ ಎಲ್ಲಿಗೆ
ತಲುಪೋ ತಾಣ ನಿನ್ನಲ್ಲಿದೆ
ಬಿಸಿಲ ಸುಡೋ ರಂಗೋಲಿಗೆ
ಭುವಿಯ ನೆಲ ಕಾದಂತಿದೆ

ಈ ಬದುಕಿನ ಸೌಖ್ಯವು
ಅಡಗಿ ನಿನ್ನ ಕಣ್ಣಲ್ಲಿದೆ
ಈ ಮಧುರ ಸಾಂಗತ್ಯವು
ಮನದ ಹೆಜ್ಜೆ ಗುರುತಾಗಿದೆ
ಅರೋಳೋ ಪ್ರತಿ ಆರಂಭಕ್ಕೂ
ಹೊಸೆವ ಕಥೆ ನೂರಾಗಿದೆ

ನೀನಲ್ಲದಿನ್ನೇಲ್ಲೂ ಗಮನಾನೇ ಇಲ್ಲ
ಒಲವಾಗಿದೆ ಬೇರೆ ಸಂದೇಹವಿಲ್ಲ
ಈ ಭಾವಲೋಕದ ಒಪ್ಪಂದವೆಲ್ಲ
ನಿಯಮಾನುಸಾರಕ್ಕೆ ಸಂಭಂಧಿಸಿಲ್ಲ
ನಾ ಬದುಕುವ ಆಸೆಗೆ
ಹುರುಪು ಈಗ ಬಂದಂತಿದೆ
ಈ ಕನಸಿನಾಕಾಶಕ್ಕೆ
ಹೊಳಪು ನೀನೇ ತಂದಂತಿದೆ

ಇಷ್ಟೊಂದು ಮೌನ
ಒಬ್ಬಂಟಿಯಾಗಿ ಬೇಕಿಲ್ಲ ನೀನಿಲ್ಲದೆ
ಅತ್ಯಂತವಾಗಿ ಅಭ್ಯಾಸವಾದೆ
ಬೇಕೆಂದೇ ಈ ಜೀವಕೆ
ಕಾರ್ಮೋಡ ಸರಿದು ಬಾಳಲ್ಲಿ
ಹೊಸದಾಗಿ ಸುಳಿದು ತಂಗಾಳಿ
ಓ ...ಬದಲಾಗಿದೆ ಲೋಕವೇ
ಒಂದಾಗಲು ಸಾಲದೇ

ನೀ ಪರಿಚಯ ಹೇಳದೆ
ಸೆಳೆದೆ ಉಸಿರನು ಮೆಲ್ಲಗೆ
ನಾ ಹೊರಟರೂ ಎಲ್ಲಿಗೆ
ತಲುಪೋ ತಾಣ ನಿನ್ನಲ್ಲಿದೆ
ಬಿಸಿಲ ಸುಡೋ ರಂಗೋಲಿಗೆ
ಭುವಿಯ ನೆಲ ಕಾದಂತಿದೆ.

Bharatlyrics.com

*More Lyrics from* [Ninna Sanihake]